
ಮಾಡಿಕೊಂಡು ತಮಗಿಷ್ಟವಾದ ವೇಷಭೂಷಣಗಳನ್ನು ಧರಿಸಬೇಕೆಂದು ಆಸೆಪಡುವ, ಮನೆಯಲ್ಲಿ ಕಪ್ಪು ಬಶಿ, ಪಿಂಗಾಣಿ ತಟ್ಟೆಗಳಲ್ಲಿ ಊಟಮಾಡಲು ಬಯಸುವ, ಯಾವಾಗಲೂ ಬಿಸಿಯೂಟ–ರುಚಿಯೂಟವನ್ನು ಬಯಸುವ ನಮ್ಮ ನಿಮ್ಮಂತಿರುವ ಸಣ್ಣ ಆಸೆಗಳ ದೊಡ್ಡ ಮನುಷ್ಯರಾಗಿ ಕಾಣುತ್ತಾರೆ. ಇದು ಅಂಬೇಡ್ಕರರನ್ನು ದೇವರ ಮಟ್ಟದಿಂದ ಮಾನವರ ಮಟ್ಟಕ್ಕೆ ಪ್ರೀತಿಯಿಂದ ಇಳಿಸುತ್ತದೆ.




ಅವರ ಅನಾರೋಗ್ಯ ಮತ್ತು 65ರ ವಯಸ್ಸಿಗೆ ತೀರಿಕೊಂಡದ್ದರಲ್ಲಿ ಬಾಲ್ಯದ ಬಡತನದ ಪಾತ್ರವಿರಬಹುದೇ ಎನ್ನುವುದನ್ನು ಯಾರೂ ನೋಡಿಲ್ಲವೆನ್ನಿಸುತ್ತದೆ. ಅಸ್ಪೃಶ್ಯತೆ ಮತ್ತು ತಿರಸ್ಕಾರದಲ್ಲಿ ಬೆಳೆದ ಬಾಲ್ಯದಲ್ಲಿ ಯಾವ ರೀತಿಯ ಆಹಾರ, ಪೌಷ್ಟಿಕತೆ ಸಿಕ್ಕಿರಬಹುದು ಮತ್ತು ಅದರ ಪ್ರಭಾವ ಜೀವಿತಾವಧಿಯ ಮೇಲೆ ಹೇಗಾಗಬಹುದು ಎನ್ನುವುದನ್ನು ಗಮನವಿಟ್ಟು ಅಧ್ಯಯನ ಮಾಡಬೇಕೇನೋ.

ಅಂಬೇಡ್ಕರ್ ಜೀವನದಲ್ಲಿ – ಮತ್ತು ಮುಖ್ಯವಾಗಿ ಗಾಂಧಿಯ ಜೊತೆಗಿನ ಮತಭೇದದಲ್ಲಿ ನಮಗೆ ಕಾಣುವುದು ಹಿಂದೂ ಧರ್ಮದ ಬಗೆಗಿನ ಮೋಹಭಂಗ ಮತ್ತು ಸಮಾನತೆಯನ್ನು ಗೌರವಿಸುವ ಸಾಂಸ್ಕೃತಿಕ ಪದ್ಧತಿಯ ಹುಡುಕಾಟ. ಚಿಕ್ಕಂದಿನಿಂದಲೂ ಆಸಕ್ತಿ ಬೆಳೆಸಿಕೊಂಡಿದ್ದ ಬೌದ್ಧ ಧರ್ಮದ ಕಡೆಗೆ ಅವರು ವಾಲುವುದರಲ್ಲಿ ಏನೂ ಆಶ್ಚರ್ಯವಿಲ್ಲ. ತಮ್ಮನ್ನು ಶೋಷಿಸಿ, ತಾರತಮ್ಯಭಾವದಿಂದ ನೋಡಿದ ಹಿಂದೂಧರ್ಮದ ವರ್ಣಾಶ್ರಮ, ವೇಷಭೂಷಣ, ಆಹಾರ ಪದ್ಧತಿ, ವಿದ್ಯೆ, ಭಾಷೆಗಳೆಲ್ಲದರ ಸೀಮೋಲ್ಲಂಘನವನ್ನು ತಮ್ಮ 65 ವರ್ಷಗಳ ಜೀವನದಲ್ಲಿ ಅವರು ಮಾಡಿತೋರಿಸುತ್ತಾರೆ.

ದಲಿತರ ಜೀವನಗಾಥೆಗಳಲ್ಲಿ ನನಗೆ ಕಂಡಿರುವ ಮತ್ತೊಂದು ಪ್ರಮುಖ ಅಂಶವನ್ನು ಸರಿಯಾಗಿ ಅಧ್ಯಯನ ಮಾಡಿ ನೋಡಬೇಕು. ಸಂಘಟಿತ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ತಂದೆ-ತಾಯಿಯರ ಮಕ್ಕಳು ವಿದ್ಯೆಯ ಬಗ್ಗೆ ಹೆಚ್ಚಿನ ಒತ್ತನ್ನು ನೀಡಿ, ದಲಿತ ಕೇರಿಗಳಿಂದ ಸೀಮೋಲ್ಲಂಘನ ಮಾಡುವುದು ಮಿಕ್ಕ ಸಂದರ್ಭಗಳಿಗಿಂತ ಸುಲಭವಿರಬಹುದು. ಸಂಘಟಿತ ಕ್ಷೇತ್ರದಲ್ಲಿ ಅದರಲ್ಲೂ ಕೆಲಸದ ಸಂದರ್ಭದಲ್ಲಿ ಅಸ್ಪೃಶ್ಯತೆ ಮತ್ತು ಇತರ ಸಾಮಾಜಿಕ ಪೀಡೆಗಳನ್ನು ಪಾಲಿಸುವದು ಕಷ್ಟ. ಸೈನ್ಯದಲ್ಲಿ, ರೈಲ್ವೇ ಇಲಾಖೆಯಲ್ಲಿ, ಸರ್ಕಾರಿ ನೌಕರಿ, ಮತ್ತು ಅದರಿಂದ ಪ್ರಾಪ್ತವಾಗುವ ಕಾಲನಿಯ ಮನೆಗಳಲ್ಲಿ ಜೀವಿಸುವ ದಲಿತರಿಗೆ ಸೀಮೋಲ್ಲಂಘನ ಮಾಡಲು ಹೆಚ್ಚಿನ ಪರಿಕರಗಳಿರಬಹುದು. ಅಂಬೇಡ್ಕರ್ ತಂದೆ ಸೈನ್ಯದಲ್ಲಿದ್ದುದದರಿಂದ ವಿದ್ಯೆಗೆ ಮಹತ್ವ ಕೊಡುವುದು ಸರಳವಾಯಿತೇ ಎನ್ನುವ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕು. ಜಾತಿಪದ್ಧತಿಯ ಪಿಡುಗನ್ನು ಮೀರಲು ವ್ಯವಸ್ಥಿತ ಕ್ಷೇತ್ರದ ನೌಕರ ಒಳ್ಳೆಯ ಸಂಭವವನ್ನು ಒದಗಿಸುವುದಾದರೆ, (ಖಾಸಗಿ ಕ್ಷೇತ್ರವನ್ನೊಳಗೊಂಡು) ನೌಕರಿಗಳಲ್ಲಿ ಆರಕ್ಷಣೆಯನ್ನು ಮುಂದುವರೆಸಲು ಒಂದು ಗಟ್ಟಿಯಾದ ಸಾಂಸ್ಕೃತಿಕ ವಾದವೂ ನಮಗೆ ಸಿಗುತ್ತದೆ.

ಇಂದಿನ 'ರಾಜಕೀಯ ಮೆಜಾರಿಟೇರಿಯನಿಸಮ್' ಸಂದರ್ಭದಲ್ಲಿ ನಾವು ಅಂಬೇಡ್ಕರ್ ಸಾಹಿತ್ಯದ ಗಂಭೀರ ಮರುಓದಿಗೆ ತೊಡಗಬೇಕು. ಇಂಥ ಪ್ರಖರ ಮೇಧಾವಿ, ನಮ್ಮ ಸಂವಿಧಾನ ರಚನಾ ಮಂಡಲಿಯ ಅಧ್ಯಕ್ಷ, ದಲಿತರ ನಾಯಕರಾದ ಅಂಬೇಡ್ಕರ್ ಲೋಕಸಭಾ ಚುನಾವಣೆಗಳಲ್ಲಿ ಸತತವಾಗಿ ಸೋತರು ಎನ್ನುವುದನ್ನು ನೆನಪು ಮಾಡಿಕೊಳ್ಳುತ್ತಲೇ, ಚುನಾವಣೆಯಲ್ಲಿ ಗೆದ್ದುಬರುವುದೇ ಸರ್ವಸ್ವ ಎನ್ನುವ ಇಂದಿನ ಮೆಜಾರಿಟೇರಿಯನ್ ಸರ್ಕಾರದ ಅಹಂಕಾರವನ್ನು ಪ್ರಶ್ನಿಸಬೇಕು. ಅಂಬೇಡ್ಕರ್ ಪುಸ್ತಕಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿರುವುದು ಒಳ್ಳೆಯದೇ. ಅರುಣ್ ಶೌರಿ ದಶಕಗಳ ಹಿಂದೆ ಅಂಬೇಡ್ಕರ್ ವಿಚಾರಗಳನ್ನು ತೀವ್ರವಾಗಿ ಟೀಕಿಸುತ್ತಿದ್ದವರೂ, ಕಡೆಗೂ ಅಂಬೇಡ್ಕರ್ ಹಾಗೆಯೇ ಬೌದ್ಧ ಧರ್ಮದಲ್ಲಿ ತಮಗಿದ್ದ ಅನುಮಾನಗಳ ಪರಿಹಾರವನ್ನೂ ಪಡೆದರು ಎನ್ನುವದರಲ್ಲಿ ಯಾವ ವಿರೋಧಾಭಾಸವೂ ಕಾಣಿಸಬಾರದು. ಅಂಬೇಡ್ಕರ್ ಹೆಚ್ಚಿನ ಅಧ್ಯಯನಕ್ಕೆ ತಮ್ಮನ್ನು ಒಡ್ಡಿಕೊಳ್ಳುತ್ತಾರೆ. ಆ ಪಯಣ ಮುಂದುವರೆಯಬೇಕಷ್ಟೆ. ●